# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1426
ಸದಸ್ಯರ ಹೆಸರು : ಶ್ರೀ ಹೆಚ್.ಎಸ್ ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವವರು : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕ ಸಬಲೀಕರಣ ಸಚಿವರು.
ಉತ್ತರಿಸಬೇಕಾದ ದಿನಾಂಕ : 22.08.2025.

******

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ಜೆ.ಜೆ. ಕಾಯ್ದೆಯ (JJAct) ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ (ಎನ್.ಜಿ.ಒ) (NGO) ಗಳ ಸಂಖ್ಯೆ ಎಷ್ಟು ಮತ್ತು (ಎನ್ .ಜಿ.ಒ) ಗಳಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; | ಕರ್ನಾಟಕ ರಾಜ್ಯದಲ್ಲಿ ಜೆ.ಜೆ. ಕಾಯ್ದೆಯ 2015 ಸೆಕ್ಷನ್ 41(1) ಅಡಿಯಲ್ಲಿ ನೋಂದಣಿಗೊಂಡು ಕಾರ್ಯನಿರ್ವಹಿಸುತ್ತಿರುವ ಎನ್.ಜಿ.ಒ ಗಳಿಂದ ನಡೆಸಲ್ಪಡುವ ಮಕ್ಕಳ ಪಾಲನಾ ಸಂಸ್ಥೆಗಳ ಸಂಖ್ಯೆ- 604. ಪ್ರಸ್ತುತ ಸದರಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಪಾಲನೆ ಮತ್ತು ರಕ್ಷಣೆ ಅಗತ್ಯವಿದ್ದು ಆಶ್ರಯ ಪಡೆಯುತ್ತಿರುವ ಮಕ್ಕಳ ಸಂಖ್ಯೆ- 14273 |
| ಆ) | ಪೋಷಕರ ಅನುಮತಿಯಿದ್ದರೂ ವಿದ್ಯಾರ್ಥಿ ನಿಲಯಗಳಲ್ಲಿ ವಾಸವಿರಲು ಅವಕಾಶ ಇದೆಯೇ; ಇದಲ್ಲಿ ವಿದ್ಯಾರ್ಥಿ ನಿಲಯಗಳಲ್ಲಿ ವಸತಿ ಪಡೆಯಲು ಜೆ.ಜೆ. ಕಾಯ್ದೆ ಅಡಿಯಲ್ಲಿ ನೋಂದಣಿ ಮಾಡಬೇಕು ಎಂದು ಅಧಿಕಾರಿಗಳು ಪದೇ ಪದೇ (NGO) ಗಳ ಮೇಲೆ ಒತ್ತಡ ಹೇರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ಒದಗಿಸುವುದು) | ಬಾಲನ್ಯಾಯಕಾಯ್ದೆಯ ಸೆಕ್ಷನ್ 2(14) ರಡಿ ಪಾಲನೆ ಮತ್ತು ರಕ್ಷಣೆ ಅಡಿ ಅಗತ್ಯವಿರುವ ಮಕ್ಕಳೆಂದರೆ ಯಾರು ಎಂದು ವ್ಯಾಖ್ಯಾನಿಸಲಾಗಿದ್ದು ಸೆಕ್ಷನ್ 2(13) ರಲ್ಲಿ ಕಾನೂನಿನೊಡನೆ ಸಂಘರ್ಷಕ್ಕೆ ಒಳಪಟ್ಟ ಮಕ್ಕಳೆಂದರೆ ಯಾರು ಎಂದು ವ್ಯಾಖ್ಯಾನಿಸಲಾಗಿದೆ ಸೆಕ್ಷನ್ 2(13),(14) ರಲ್ಲಿ ವ್ಯಾಖ್ಯಾನಿಸಿರುವ ಮಕ್ಕಳನ್ನು ದಾಖಲು ಮಾಡಿಕೊಂಡಿರುವ ಎಲ್ಲಾ ಸರ್ಕಾರಿ ಮತ್ತು ಸರ್ಕಾರೇತರ ಮಕ್ಕಳ ಪಾಲನಾ ಸಂಸ್ಥೆಗಳನ್ನು ಬಾಲನ್ಯಾಯ ಕಾಯ್ದೆ 2015 ಸೆಕ್ಷನ್ 41(1) ಅಡಿ ಕಡ್ಡಾಯವಾಗಿ ನೋಂದಾಯಿಸಬೇಕಾಗಿರುತ್ತದೆ. |
| ಇ) | ಪೋಷಕರ ಅನುಮತಿಯೊಂದಿಗೆ ಹೊರ ರಾಜ್ಯದ ಮತ್ತು ಕರ್ನಾಟಕ ರಾಜ್ಯದ ಮಕ್ಕಳಿಗೆ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾಭ್ಯಾಸ ಮತ್ತು ವಸತಿ ಪಡೆಯುತ್ತಿರುವ ಮಕ್ಕಳಿಗೆ NGO ಗಳಿಗೆ ಜಿ.ಜಿ ಕಾಯ್ದೆ ಅನ್ವಯವಾಗುತ್ತಿದೆಯೇ; (ವಿವರ ನೀಡುವುದು) ಮತ್ತು ಸರ್ಕಾರದ ಯಾವುದಾದರೂ ಸುತ್ತೋಲೆ ಇದೆಯೇ? (ಅದರ ಪ್ರತಿ ನೀಡುವುದು) | |

ಮಮಇ 121 ಮಭಾಬ 2025

(ಲಕ್ಷ್ಮೀ ಆರ್. ಹೆಬ್ಬಾಳ್ಕರ್)
ಮಹಿಳಾ ಮತ್ತುಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರೀಕರ
ಸಬಲೀಕರಣ ಸಚಿವರು.